| | | | |
|---|---|---|---|
| 4. | ಶಿರಾ | 100.00 | 102.153 |
| 5. | ಚಿಕ್ಕನಾಯಕನಹಳ್ಳಿ | 75.00 | 75.682 |
| 6. | ತಿಪಟೂರು | 75.00 | 74.895 |
| 7. | ಗುಬ್ಬಿ | 100.00 | 94.278 |
| 8. | ಕುಣಿಗಲ್ | 100.00 | 96.849 |
| 9. | ತುಮಕೂರು | 100.00 | 102.052 |
| 10. | ತುರುವೇಕೆರೆ | 25.00 | - |
| | ಒಟ್ಟು | 825.00 | 807.034 |

**ಗ್ರಾಮೀಣ ಪ್ರದೇಶಗಳಲ್ಲಿ ವೃತ್ತಿ ಶಿಕ್ಷಣ ತರಗತಿಗಳನ್ನು ತೆರೆಯುವುದು.**

2665 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ಸಚಿವರು : ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಗ್ರಾಮೀಣ ಪ್ರದೇಶದಲ್ಲಿ ವಿದ್ಯಾರ್ಥಿಗಳಿಗೆ ವೃತ್ತಿ ಶಿಕ್ಷಣ ತರಗತಿಗಳನ್ನು ತೆರೆಯುವ ಯೋಜನೆ ಇದೆಯೇ? ಇದನ್ನು ಯಾವಾಗ ಪ್ರಾರಂಭಿಸಲಾಗುವುದು?*

*ಆ) ಗ್ರಾಮೀಣ ಜನರಿಗೆ ಅನುಕೂಲವಾದ ವೃತ್ತಿ ಶಿಕ್ಷಣ ಪಠ್ಯಕ್ರಮ ಯಾವುವು? (ವಿವರ ನೀಡುವುದು)*

ಆರ್. ಕೃಷ್ಣಪ್ಪ (ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ಸಚಿವರು) :

ಅ)

1978ರ ಪ್ರಾರಂಭದಿಂದಲೂ ವೃತ್ತಿ ಶಿಕ್ಷಣ ಕೋರ್ಸುಗಳನ್ನು ಗ್ರಾಮೀಣ ಪ್ರದೇಶಗಳಿಗೂ ನೀಡುತ್ತಾ ಬಂದಿದೆ. ಪ್ರಸ್ತುತ ಇರುವ ಒಟ್ಟು 1363 ಕೋರ್ಸುಗಳ ಪೈಕಿ 974 ಕೋರ್ಸುಗಳು ಗ್ರಾಮೀಣ ಪ್ರದೇಶದಲ್ಲಿ ನಡೆಯುತ್ತಿವೆ.

ಆ) 1) ಆರೋಗ್ಯ ಮತ್ತು ಅರೆ ವೈದ್ಯಕೀಯ ಸೇವೆಗಳು

2) ಕೃಷಿ ವಿಜ್ಞಾನ ಮತ್ತು ಅದಕ್ಕೆ ಸಂಬಂಧಿಸಿದ ಸೇವೆಗಳು

3) ಆಟೋಮೊಬೈಲ್ ಸರ್ವೀಸಿಂಗ್

4) ಟೂ-ವೀಲರ್ಸ್ ಸರ್ವೀಸಿಂಗ್

5) ಎಲೆಕ್ಟ್ರಿಕಲ್ ವೈರಿಂಗ್ ಮತ್ತು ಸರ್ವೀಸಿಂಗ್ ಆಫ್ ಎಲೆಕ್ಟ್ರಿಕಲ್ ಅಪ್ಲಯನ್ಸ್

6) ಕ್ಲಾಕ್ ಅಂಡ್ ವಾಚ್ ರಿಪೇರಿ ಟೆಕ್ನಾಲಜಿ

7) ಕ್ಲಾತಿಂಗ್ ಮತ್ತು ಎಂಬ್ರಾಯಡರಿ

8) ಟಿ.ವಿ.ಅಂಡ್ ರೇಡಿಯೋ ಸರ್ವೀಸಿಂಗ್

9) ಪೌಲ್ಟ್ರಿ ಸೈನ್ಸ್

10) ಹೈನುಗಾರಿಕೆ
11) ರೇಷ್ಮೆ ಕೃಷಿ
12) ಮೀನುಗಾರಿಕೆ
13) ಅಗ್ರಿಕಲ್ಚರ್ ಕೆಮಿಕಲ್ಸ್
14) ಪ್ಲಾಂಟೇಷನ್ ಕ್ರಾಪ್ಟ್ ಅಂಡ್ ಮ್ಯಾನೇಜ್‌ಮೆಂಟ್
15) ತೋಟಗಾರಿಕೆ
16) ಮಲ್ಟಿಪರಪಸ್ ಬೇಸಿಕ್ ಹೆಲ್ತ್ (ಮೇಲ್)
17) ಸರ್ವೆಯಿಂಗ್ (ಒಂದು ವರ್ಷದ ಅವಧಿ)
18) ಫ್ರೀ ಸ್ಕೂಲ್ ಎಜುಕೇಷನ್ (ಒಂದು ವರ್ಷದ ಅವಧಿ)
19) ನೀರು ಸರಬರಾಜು ಮತ್ತು ಒಳಚರಂಡಿ ಇಂಜಿನಿಯರಿಂಗ್

**ದ.ಕ. ಹಾಗೂ ಉ.ಕ. ಜಿಲ್ಲೆಯಲ್ಲಿ ಕಾಂಡ್ಲವನದ ಸಂರಕ್ಷಣೆ ಮತ್ತು ಪುನರ್ ನಿರ್ಮಾಣ.**

2660 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಂಡ್ಲ ವನದ ಪುನರ್ ನಿರ್ಮಾಣ ಮತ್ತು ಸಂರಕ್ಷಣೆಗೆ ಎಷ್ಟು ಎಕರೆ ಸ್ಥಳವನ್ನು ಕಾಯ್ದಿರಿಸಲಾಗಿದೆ?*

*ಆ) ಯಾವ ಯಾವ ಗ್ರಾಮಗಳಲ್ಲಿ ಎಷ್ಟು ಸ್ಥಳಗಳಲ್ಲಿ ಕಾಂಡ್ಲ ಗಿಡಗಳನ್ನು ಪುನರ್ ನಿರ್ಮಾಣ ಮತ್ತು ಸಂರಕ್ಷಣೆ ಮಾಡುವ ಯೋಜನೆ ಇದೆಯೇ? (ತಾಲ್ಲೂಕು ವಾರು ವಿವರ ನೀಡುವುದು).*

*ಇ) ಇದಕ್ಕೆ ತಗಲುವ ಅಂದಾಜು ವೆಚ್ಚವೆಷ್ಟು?*

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಸಚಿವರು) :

1996-97ನೇ ಸಾಲಿನಲ್ಲಿನ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 140 ಹೆಕ್ಟೇರ್ ಉತ್ತರ ಕನ್ನಡ ಜಿಲ್ಲೆಯಲ್ಲಿ 22 ಹೆಕ್ಟೇರ್ ಪ್ರದೇಶದಲ್ಲಿ ಕಾಂಡ್ಲವನ ಅಭಿವೃದ್ಧಿ ಪಡಿಸಲಾಗುವುದು.

ಆ) ಕಾಂಡ್ಲ ವನ ನಿರ್ಮಾಣ ಮಾಡುವ ಯೋಜನೆ ಕೆಳಕಂಡ ಗ್ರಾಮಗಳಲ್ಲಿ ಹಮ್ಮಿಕೊಳ್ಳಲಾಗಿದೆ.

| ಜಿಲ್ಲೆ | ತಾಲ್ಲೂಕು | ಗ್ರಾಮಗಳು |
|---|---|---|
| ದಕ್ಷಿಣ ಕನ್ನಡ | ಕುಂದಾಪುರ | 1) ಒಡೆಯರ ಹೋಬಳಿ |
| | | 2) ಕುಂದಾಪುರ |
| | | 3) ಕಸಬಾ |
| | | 4) ಹೆಮ್ಮಾಡಿ |
| | | 5) ಪಡುವೇರಿ |
| | | 6) ಉಪ್ಪುಂದ |